
ನವಸಾಕ್ಷರ ಪುಸ್ತಕ ಮಾಲೆ ೪೫

ಜೆನ್ ಕಥೆಗಳು

ಡಾ. ಕೆ. ವಿ. ನಾರಾಯಣ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಪಾದಕ ಸಮಿತಿ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ - ೪೫

ಜೆನ್ ಕಥೆಗಳು

ಡಾ. ಕೆ. ವಿ. ನಾರಾಯಣ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೭೭

ZEN KATHEGALU : By Dr. K. V. Narayana. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ಅಭಿಮಾನಿ ಪ್ರಕಾಶನ
೯೬, ಡಾ.ರಾಜಕುಮಾರ್ ರಸ್ತೆ,
ರಾಜಾಜಿನಗರ,
ಬೆಂಗಳೂರು—೫೬೦ ೦೨೧

ಜೆನ್ ಕತೆಗಳು

ಜೆನ್ ಎಂಬುದು ಜಪಾನಿನಲ್ಲಿ ಜನರು ಪಾಲಿಸುವ ಒಂದು ಧರ್ಮ. ಇದು ಭೌದ್ಧ ಧರ್ಮದ ಒಂದು ಬಗೆ. 'ಧ್ಯಾನ' ಎಂಬ ಪದವನ್ನು ಕೇಳಿದ್ದೀರಿ. ಅದನ್ನು ಚೀನಿ ಭಾಷೆಯವರು ಉಚ್ಚರಿಸುವಾಗ 'ಚಾನ್' ಎಂದರು. ಅದನ್ನು ಜಪಾನೀಯರು 'ಜೆನ್'ಎಂದು ಉಚ್ಚರಿಸಿದರು. ಜೆನ್ ಒಂದು ಧರ್ಮ ಎನ್ನುವುದಕ್ಕಿಂತ ಒಂದು ಜೀವನ ವಿಧಾನ ಎನ್ನಬಹುದು. ಈ ಧರ್ಮದಲ್ಲಿ ದಿನನಿತ್ಯದ ನೂರಾರು ವ್ಯವಹಾರಗಳು ಹೇಗಿರಬೇಕೆಂಬುದು ಮುಖ್ಯವಾಗುತ್ತದೆ.

ಜೆನ್ ಧರ್ಮದಲ್ಲಿ ಗುರುಗಳಿರುತ್ತಾರೆ. ಅವರು ಕಲಿಸುವವರಲ್ಲ. ಕಲಿಯಲು ನೆರವಾಗುವವರು. ಕಲಿಯುವವನು ಶಿಷ್ಯ. ಅವನು ಕಲಿಯಲು ಅನುಕೂಲವಾಗುವಂತೆ ಗುರುಗಳು ನೆರವಾಗುತ್ತಾರೆ. ಹಾಗೆ ನೆರವಾಗಲು ಅವರು ಹಲವು ಬಗೆಗಳನ್ನು ಅನುಸರಿಸುತ್ತಾರೆ. 'ಕೋನ್' ಎಂಬ ಮುಂಡಿಗೆಗಳನ್ನು ನೀಡಿ ಅವುಗಳನ್ನು ಕುರಿತು ಆಲೋಚಿಸಲು ಹೇಳುತ್ತಾರೆ. ಅದನ್ನು ಕುರಿತು ಚಿಂತಿಸುತ್ತ ಕುಳಿತವನಿಗೆ ಸತ್ಯ ಗೋಚರಿಸುತ್ತದೆ. ಈ ಸತ್ಯ ಎಂಬುದು ಕೇವಲ ತಿಳುವಳಿಕೆಯಲ್ಲ. ಜೀವನದ ಒಂದು ಕ್ರಮ. ತಿಳಿದವನು ಅದನ್ನು ತನ್ನ ನಿತ್ಯ ಜೀವನದಲ್ಲಿ ಪಾಲಿಸತೊಡಗುತ್ತಾನೆ.

ಹೀಗೆ ಹೂ ಜೋಡಿಸುವುದು, ತೋಟ ಮಾಡುವುದು, ಚಹಾ ಮಾಡುವುದು, ಬಿಲ್ಲು ವಿದ್ಯೆ, ಜುಡೋ ಎಂಬ ಕುಸ್ತಿ ಇಂಥ ಹತ್ತಾರು ಬಗೆಗಳಲ್ಲಿ ಜೆನ್ ಬಳಕೆಯಾಗುತ್ತದೆ.

ಗುರುಗಳು ಜನರಿಗೆ ತಿಳಿಹೇಳಲು ಬಳಸಿದ ಇನ್ನೊಂದು ವಿಧಾನವೆಂದರೆ ಕತೆಗಳನ್ನು ಹೇಳುವುದು. ಈ ಕತೆಗಳು ಕೇವಲ ನೀತಿಗಳಲ್ಲ. ನೀತಿ ಕತೆಗಳಂತೆ ತೋರುತ್ತವೆ. ತಿಳಿಯಲು ಈ ಕತೆಗಳಲ್ಲಿ ಎಷ್ಟೋ ವಿಷಯಗಳಿವೆ. ಅದನ್ನು ಅರಿಯಲೆಂದು ಕೆಲವನ್ನು ಇಲ್ಲಿ ಕೂಡಿಹಾಕಿದ್ದೇವೆ.

ಕತೆ ೧

ಒಂದು ಊರಿನಲ್ಲಿ ಒಬ್ಬ ಸನ್ಯಾಸಿ ಇದ್ದ. ಒಂದು ದಿನ ಅವನ ಬಳಿಗೆ ಒಬ್ಬ ಸೈನಿಕ ಬಂದ. ಬಂದವನು ಸನ್ಯಾಸಿಯನ್ನು "ಏನು ಸ್ವಾಮಿ, ಸ್ವರ್ಗ ನರಕ ಅನ್ನುತ್ತಾರಲ್ಲ ಅವು ಇವೆಯೋ ?" ಎಂದು ಕೇಳಿದ. ಆಗ ಸನ್ಯಾಸಿ "ಏನಯ್ಯಾ ಯಾರು ನೀನು ?ಎಲ್ಲಿ ಯಾರ ಬಳಿ ಕೆಲಸ ಮಾಡುತ್ತಿ " ಎಂದು ಕೇಳಿದ. "ನಾನು ಒಬ್ಬ ಸೈನಿಕ, ಈ ದೇಶದ ಮಹಾರಾಜರ ಬಳಿ ಸೈನ್ಯದಲ್ಲಿ ಕೆಲಸ ಮಾಡುತ್ತೇನೆ " ಎಂದ ಸೈನಿಕ. ಅದಕ್ಕೆ ಸನ್ಯಾಸಿಯು "ಓಹೋ, ಮಹಾರಾಜರ ಬಳಿ ದುಡಿಯುತ್ತೀಯೋ ?ನೋಡಿದರೆ ಒಬ್ಬ ಭಿಕಾರಿಯ ಹಾಗೆ ಕಾಣುತ್ತಿ " ಎಂದನು. ಈ ಮಾತು ಕೇಳಿದ ಸೈನಿಕ ತನ್ನಲ್ಲಿದ್ದ ಕತ್ತಿಯನ್ನು ಒರೆಯಿಂದ ತೆಗೆದು ಸೆಟೆದು ನಿಂತ. " ಎಂಥ ಕತ್ತಿಯಯ್ಯಾ ಇದು. ಮೊಂಡಾಗಿದೆ. ಇದು ನನ್ನ ಕತ್ತನ್ನು ಕತ್ತರಿಸಲಾರದು. ಬೇಕಾದರೆ ಬಾಜಿ ಕಟ್ಟುತ್ತೇನೆ " ಎಂದ ಸನ್ಯಾಸಿ. ಕೂಡಲೇ ಕೆರಳಿದ ಸೈನಿಕ ಕತ್ತಿ ಬಾಚಿ ಸನ್ಯಾಸಿಯ ಕಡೆಗೆ ಮುನ್ನುಗಿದ. ಆಗ ಸನ್ಯಾಸಿಯು "ನೋಡು ನೋಡು ನಿನ್ನ ಪ್ರಶ್ನೆಗೆ ಅರ್ಧ ಉತ್ತರ ಸಿಕ್ಕಿತು. ಈಗ ನೀನು ನರಕದ ಬಾಗಿಲು ತಟ್ಟುತ್ತಿದ್ದೀಯೆ " ಎಂದನು. ಸೈನಿಕನು ತಟಕ್ಕನೆ ಶಾಂತನಾಗಿ ತನ್ನ ಕತ್ತಿಯನ್ನು ಹಿಂದಕ್ಕೆಳೆದುಕೊಂಡು ಅದನ್ನು ಒರೆಗೆ ಸೇರಿಸಿದ. ಎರಡು ಹೆಜ್ಜೆ ಹಿಂದೆ ಸರಿದು ನಿಂತ. ಸನ್ಯಾಸಿಯತ್ತ ತಲೆಬಾಗಿಸಿ ತಪ್ಪನ್ನು ಮನ್ನಿಸಲು ಕೋರುವವನಂತೆ ನಿಂತುಕೊಂಡ. " ನೋಡು ನಿನ್ನ ಪ್ರಶ್ನೆಗೆ ಇನ್ನರ್ಧ ಉತ್ತರ ಸಿಕ್ಕಿದೆ, ನೀನು ಸ್ವರ್ಗದ ಬಾಗಿಲು ತಟ್ಟುತ್ತಿದ್ದೀಯೆ " ಎಂದನು ಸನ್ಯಾಸಿ.



ಸೈನಿಕ ಏನು ಸ್ವಾಮಿ, ಸ್ವರ್ಗ ನರಕಗಳಿವೆಯೋ ?



ಕತ್ತಲಲ್ಲಿ ಕುರುಡ ದೀಪ ಹಿಡಿದುಕೊಂಡು ಹೋಗುತ್ತಿರುವುದು

ಕತೆ ೨

ಕಗ್ಗತ್ತಲು. ಆಕಾಶದಲ್ಲಿ ಮಿನುಗುವ ತಾರೆಗಳಿಲ್ಲ. ಕಪ್ಪು ಮೋಡಗಳು ಕವಿದಿದ್ದವು. ಈಗಲೋ ಆಗಲೋ ಮಳೆ ಬರುವಂತೆ ತೋರುತ್ತಿತ್ತು. ಬಿರುಗಾಳಿ ಬೀಸುತ್ತಿತ್ತು. ರಸ್ತೆಯಲ್ಲಿ ನಡೆಯುವುದೇ ಕಷ್ಟ. ಅಂಥ ವೇಳೆಯಲ್ಲಿ ಒಬ್ಬ ಸನ್ಯಾಸಿ ಬೀದಿಯಲ್ಲಿ ನಡೆಯುತ್ತಿದ್ದ. ಅವನ ಕೈಯಲ್ಲಿ ಒಂದು ಕೋಲು. ಅದರ ತುದಿಗೆ ಲಾಂದ್ರವನ್ನು ಸಿಕ್ಕಿಸಲಾಗಿತ್ತು. ಗಾಳಿಗೆ ದೀಪದ ಉರಿ ಆರಿಹೋಗದಂತೆ ಸುತ್ತ ಮರೆ ಮಾಡಿದ್ದರು. ಕೋಲು ಹಿಡಿದು ದೀಪ ತೂಗುತ್ತ ಸನ್ಯಾಸಿ ಬೀದಿಯಲ್ಲಿ ನಡೆದು ಹೋಗುತ್ತಿದ್ದ. ಆಗ ಎದುರುಗಡೆಯಿಂದ ಮತ್ತೊಬ್ಬ ಬಂದನು. ಅವನ ಕೈಯಲ್ಲಿ ಯಾವ ದೀಪವೂ ಇರಲಿಲ್ಲ. ಸನ್ಯಾಸಿಯ ಬಳಿ ಬಂದವನು ಅವನನ್ನು ಹತ್ತಿರದಿಂದ ನೋಡಿದ. ಸನ್ಯಾಸಿ ಕುರುಡನೆಂಬುದು ಅವನಿಗೆ ಗೊತ್ತಾಯಿತು. ಆಗ ಅವನಿಗೆ ನಗೆ ತಡೆಯಲಾಗಲಿಲ್ಲ. ಸನ್ಯಾಸಿಯನ್ನು ಕೇಳಿದ. "ಏನು ಸ್ವಾಮಿ ಕಣ್ಣು ಕಾಣದ ನೀವು ಕತ್ತಲಲ್ಲಿ ನಡೆಯುವಾಗ ದೀಪ ಹಿಡಿದಿದ್ದೀರಲ್ಲ ?" ಸನ್ಯಾಸಿ ಶಾಂತ ಮನಸ್ಸಿನಿಂದ "ದೀಪ ಹಿಡಿದಿರುವುದು ನನಗಾಗಿ ಅಲ್ಲಪ್ಪ. ರಸ್ತೆಯಲ್ಲಿ ನಡೆದು ಬರುವ ಬೇರೆಯವರಿಗಾಗಿ " ಎಂದನು.

ಕಥೆ ೩

ಚದುರಂಗವೆಂಬುದು ಒಂದು ಆಟ. ಅದನ್ನು ಆಡಲು ತುಂಬ ಜಾಣತನ ಬೇಕು, ತುಂಬಾ ತಾಳ್ಮೆ ಬೇಕು. ಈ ಆಟದಲ್ಲಿ ಪಳಗಿದ ಆಟಗಾರನೊಬ್ಬನಿದ್ದ. ಅವನು ಆಟ ಆಡುವಾಗ ಜಗತ್ತಿನಲ್ಲಿ ಬೇರೆ ಏನೂ ಇಲ್ಲವೇನೋ ಎಂಬಂತೆ ಅದರಲ್ಲೇ ಮುಳುಗಿರುತ್ತಿದ್ದ. ಸುತ್ತಮುತ್ತ ಏನೇ ನಡೆದರೂ ಅದರ ಬಗೆಗೆ ಗಮನ ಹರಿಸುತ್ತಿರಲಿಲ್ಲ. ಮುಖವನ್ನು ಸದಾ ಶಾಂತವಾಗಿರಿಸಿಕೊಂಡಿರುತ್ತಿದ್ದ. ಗಾಬರಿ, ಸಂತೋಷ, ಭಯ, ಚಡಪಡಿಕೆಗಳು ಅವನ ಮುಖದಲ್ಲಿ ಆಟ ಆಡುವಾಗ ಕಾಣಬರುತ್ತಿರಲಿಲ್ಲ. ನೋಡಿದವರಿಗೆ ಇವನೊಬ್ಬ ಯಾವ ಭಾವನೆಗಳೂ ಇಲ್ಲದ ಕಲ್ಲು ಎನಿಸುವಂತೆ ಇರುತ್ತಿದ್ದ. ಆಟ ಮುಗಿಸಿ ಬಂದನೋ ಅವನ ಕುಣಿತಗಳಿಗೆ ಮಿತಿಯೇ ಇರುತ್ತಿರಲಿಲ್ಲ. ಯಾವಾಗಲೂ ಏನಾದರೊಂದು ಮಾತಾಡುತ್ತಾ ನಗೆಯಾಡುತ್ತಿದ್ದ. ಬೇಕಾದಾಗ ಜಗಳವಾಡುತ್ತಿದ್ದ. ಕೋಪ ತೋರುತ್ತಿದ್ದ.

ಇದನ್ನು ಕಂಡ ಒಬ್ಬಾತ ಅವನ ಬಳಿಗೆ ಹೋಗಿ "ಅಯ್ಯಾ ನೀನು ಚದುರಂಗ ಆಡುವಾಗ ಯಾವ ಭಾವನೆಗಳೂ ಇಲ್ಲದವನಂತೆ ಅದರಲ್ಲೇ ಮುಳುಗಿರುತ್ತೀಯ. ಆದರೆ ಆಟ ಮುಗಿದ ಮೇಲೆ ಎಂದಿನ ಜನರಂತೆ ಇರುತ್ತೀಯಾ ? ಇದು ಹೇಗೆ ಸಾಧ್ಯ? ಎಂದು ಕೇಳಿದನು. ಆಗ ಆ ಆಟಗಾರನು ಹೀಗೆಂದನು."ಚಿಕ್ಕವನಿದ್ದಾಗಲೇ ನಾನು ಈ ಆಟವನ್ನು ಆಡಲು ಕಲಿತೆ. ತುಂಬ ಚೆನ್ನಾಗಿ ಆಡುತ್ತಿದ್ದೆ. ಒಮ್ಮೆ ಒಬ್ಬ ಆಟಗಾರ ನನ್ನ ಬಳಿ ಆಡಲು ಬಂದು ಕುಳಿತ. ಅವನು ಬೇರೆ ಬೇರೆ ಕಡೆ ಆಡುವುದನ್ನು ನಾನು ಕಂಡಿದ್ದೆ. ಅವನು ಖಂಡಿತ ನನಗಿಂತ ಕಡಿಮೆ ದರ್ಜೆಯ ಆಟಗಾರನೆಂಬುದು ನನಗೆ ಗೊತ್ತಿತ್ತು. ಆಟದಲ್ಲಿ ನಾನು ಗೆಲ್ಲುವುದು ನನಗೆ ಖಚಿತವಿತ್ತು. ಆಟ ಮೊದಲು ಮಾಡಿದೆ. ನಾನು ನನ್ನ ನಡೆಗಳನ್ನು ಬೇಗಬೇಗ ನಡೆಸುತ್ತಿದ್ದೆ. ಅವನು ಬೇಕೆಂತಲೇ ತನ್ನ ನಡೆಗಳನ್ನು ನಿಧಾನವಾಗಿ ಮಾಡುತ್ತಿದ್ದ. ಸುಲಭದ ನಡೆಗಳನ್ನು ಮಾಡುವಾಗಲೂ ಸಾಕಷ್ಟು ಸಮಯ ತೆಗೆದುಕೊಳ್ಳುತ್ತಿದ್ದ. ಅವನು ನಡೆಗಳನ್ನು ನಡೆಸುವುದನ್ನು ತಡಮಾಡಿದ ಹಾಗೆ ನನ್ನಲ್ಲಿ ಚಡಪಡಿಕೆ ಉದ್ವೇಗಗಳು ಹೆಚ್ಚಾಗುತ್ತಿದ್ದವು. ಆಗ ನನ್ನ ಮುಖವನ್ನು ನೋಡಿ ನಾನು ಚಡಪಡಿಸುತ್ತಿದ್ದೇನೆಂಬುದನ್ನು ಪತ್ತೆಮಾಡಿದವನಂತೆ ನಗುತ್ತ ತನ್ನ ನಡೆಯನ್ನು ಮಾಡುತ್ತಿದ್ದ. ನನ್ನ ನಡೆ ಏನಾಗಬೇಕೆಂದು ಬಹು ಹಿಂದೆಯೇ ಆಲೋಚಿಸಿರುತ್ತಿದ್ದ ನಾನು ಅವನು ನಡೆಯನ್ನು ಮಾಡಿದ ಕೂಡಲೇ ನನ್ನ ನಡೆಯನ್ನು ನಡೆಸುತ್ತಿದ್ದೆ. ಮತ್ತೆ ಅವನು ತನ್ನ ನಡೆಗೆ ಬೇಕೆನಿಸುವಷ್ಟು ಸಮಯ ತೆಗೆದುಕೊಳ್ಳುತ್ತಿದ್ದ. ಅವನ ಆಟ ನಿಧಾನವಾಗುತ್ತಾ ಹೋದಂತೆ ನಾನು ಬೇಗ ಬೇಗ ನನ್ನ ನಡೆಗಳನ್ನು ನಡೆಸಿ ಮತ್ತೆ ಚಡಪಡಿಸುತ್ತ ಕೂರುತ್ತಿದ್ದೆ. ಕೊನೆಗೆ ಆಟದಲ್ಲಿ ನಾನು ತಪ್ಪುಗಳನ್ನು ಮಾಡುವುದು ಹೆಚ್ಚಾಗುತ್ತಾ ಹೋಯಿತು. ಹೀಗಾಗಿ ನಾನು ಸೋಲುವುದು, ಆತ ಗೆಲ್ಲುವುದು ಖಚಿತವಾಗುತ್ತಿತ್ತು. ಮೊದಮೊದಲು ನಾನು ಎದುರಾಳಿಯ ಈ ತಂತ್ರವನ್ನು ಅರಿಯಲಿಲ್ಲ. ಕೊನೆಗೊಮ್ಮೆ ಅದನ್ನು ಅರಿತುಕೊಂಡೆ. ಅಂದಿನಿಂದ ನಾನು ಆಡುವ ತಂತ್ರವೇ ಬದಲಾಗುತ್ತಾ ಹೋಯಿತು. ಹಾಗೆಯೇ ನಾನು ಜೀವಿಸುವ ವಿಧಾನ ಕೂಡ"

ಕತೆ ೪

ಒಬ್ಬ ಹೆಸರಾಂತ ಗುರುವಿನ ಬಳಿಗೆ ಒಂದು ದಿನ ಒಬ್ಬ ಬಂದ. ಆ ಗುರುವಿನ ಬಗೆಗೆ ಎಲ್ಲರೂ ಹೊಗಳುತ್ತಿದ್ದರು. ಅವನೊಡನೆ ಮಾತಾಡುತ್ತಿದ್ದರೆ ಸಾಕು, ಇನ್ನೇನೂ ಬೇಡ ಎನ್ನುವವರಿದ್ದರು. ಬಂದವನು ಗುರುವಿನ ಬಳಿ ಕುಳಿತ. ತಾನು ಯಾರು ಎಂಬುದನ್ನು ಹೇಳಿಕೊಂಡ. ಮತ್ತೆ ಮತ್ತೆ ತನ್ನ ಬಗೆಗೆ ಮಾತಾಡುತ್ತಾ ಹೋದ. ತಾನು ಯಾವ ಯಾವ ವಿಚಾರದಲ್ಲಿ ಆಸಕ್ತ, ಏನೇನನ್ನು ಓದಿದ್ದೇನೆ, ಯಾವ ಯಾವ ಕಡೆಗೆ ಅರಿವನ್ನು ಪಡೆಯಲು ಹೋಗಿದ್ದೆ, ಹೀಗೆ ಹೇಳುತ್ತಲೇ ಇದ್ದ. ಗುರು ತನ್ನ ಪಾಡಿಗೆ ತಾನು ಪಾತ್ರೆಯೊಂದರಿಂದ



ಬಟ್ಟಲಿಗೆ ಚಹಾ ಸುರಿಯುತ್ತಿದ್ದ. ಚಹದ ಬಟ್ಟಲು ತುಂಬಿತು. ಬಂದವನ ಮಾತು ಮುಂದುವರೆಯುತ್ತಲೇ ಹೋದಂತೆ ಗುರು ಚಹಾ ಸುರಿಯುವುದೂ ಮುಂದುವರೆದಿತ್ತು. ಮಾತಾಡುತ್ತಲೇ ಇದನ್ನು ಗಮನಿಸುತ್ತಿದ್ದ ಬಂದವನು ತಡೆಯಲಾಗದೆ ಕೇಳಿದ. "ಏನಿದು ಬಟ್ಟಲು ತುಂಬಿರುವುದು ಕಾಣಿಸುತ್ತಿಲ್ಲವೇ ? ಮತ್ತೇಕೆ ಅದರೊಳಕ್ಕೆ ಚಹಾ ಸುರಿಯುತ್ತಿದ್ದೀರಿ ?" ಗುರು ನಸು ನಗುತ್ತಾ " ತುಂಬಿದ ಬಟ್ಟಲೊಳಗೆ ಚಹಾ ಸುರಿಯುವುದು ಸಾಧ್ಯವಿಲ್ಲ. ಹಾಗೆ ಸುರಿದರೆ ಹೆಚ್ಚಾದದ್ದು ಹೊರಗೆ ಚೆಲ್ಲಿ ಹೋಗುತ್ತದೆ. ಅದನ್ನು ನೀನೇ ಕಂಡಿರುವೆ. ಎಲ್ಲ ಬಲ್ಲವನಂತಿರುವ ನೀನೂ ತುಂಬಿದ ಚಹದ ಬಟ್ಟಲಿನಂತೆ ಎಂದರು.

ಕತೆ ೫

ಇನ್ನೊಬ್ಬ ಗುರುವಿನ ಕತೆಯಿದು. ಈತ ಚಿಕ್ಕವನಾಗಿದ್ದಾಗಲೇ ಬಲು ಜಾಣನೆಂದು ಹೆಸರಾಗಿದ್ದ. ಒಮ್ಮೆ ತನ್ನ ಗುರುವಿನ ಬಳಿ ಕೆಲಸ ಮಾಡುತ್ತಿದ್ದ. ಗುರುವಿನ ಮನೆಯಲ್ಲಿ ಅದೂ ಇದೂ ಕೆಲಸ ಮಾಡುತ್ತಿದ್ದಾಗ ಪಾತ್ರೆ ತೊಳೆಯ ಬೇಕಾಯಿತು. ಪಿಂಗಾಣಿ ಬಟ್ಟಲು ತಟ್ಟೆಗಳನ್ನು ತೊಳೆದು ಒರೆಸಿ ಇಡುತ್ತಿದ್ದಾಗ ಅಕಸ್ಮಾತ್ ಕೈ ಜಾರಿ



ತಟ್ಟೆಯೊಂದು ಬಿದ್ದು ಒಡೆದುಹೋಯಿತು. ಏನು ಮಾಡುವುದೆಂದು ತೋಚದೆ ಕೊನೆಗೆ ಚೂರೂಚೂರಾದ ತಟ್ಟೆಯನ್ನು ಕೂಡಿಸಿ ಮುಚ್ಚಿಟ್ಟ. ಗುರು ಸಂಜೆ ಮನೆಗೆ ಬಂದಾಗ ಈ ಹುಡುಗ ಗುರುವಿನ ಬಳಿ ಹೋಗಿ ನಮಸ್ಕಾರ ಮಾಡಿ ಮಾತಿಗೆ ಮೊದಲು ಮಾಡಿದ. "ಗುರುವೇ ಎಲ್ಲರೂ ಸಾಯುವುದೇತಕ್ಕೆ ? ಎಲ್ಲ ವಸ್ತುಗಳು ನಾಶ ಹೊಂದುವುದೇತಕ್ಕೆ ?" ಇದು ಹುಡುಗನ ಪ್ರಶ್ನೆ.

ಗುರು ಈ ಮಾತು ಕೇಳಿ ಕಣ್ಣು ಅರೆ ಮುಚ್ಚಿ ಹೀಗೆಂದ . "ಮಗು ಕಾಲ ಬಂದಾಗ ಎಲ್ಲ ವಸ್ತುಗಳೂ ನಾಶ ಹೊಂದಲೇ ಬೇಕು. ಎಲ್ಲವೂ ಉಂಟಾಗಿರುವುದು ಗಾಳಿ, ನೀರು, ಬೆಂಕಿ, ಮಣ್ಣು ಮತ್ತು ಆಕಾಶಗಳಿಂದ. ಎಲ್ಲ ಮುಗಿದ ಮೇಲೆ ಜೀವಗಳಿರಲಿ ವಸ್ತುಗಳಿರಲಿ ಎಲ್ಲವೂ ಮತ್ತೆ ಮೂಲವಸ್ತುಗಳಾಗಲೇ ಬೇಕು." ಹುಡುಗ ಮಾತು ಕೇಳಿ ಒಳಹೋದ. ಹೊರಗೆ ಬರುತ್ತ ಗುರುವಿನ ಎದುರು ತಾನು ಕೂಡಿಸಿಟ್ಟ ತಟ್ಟೆಯ ಚೂರುಗಳನ್ನು ಇಡುತ್ತ "ಗುರುವೇ, ನಾವು ಇಲ್ಲಿ ದಿನವೂ ಬಳಸುತ್ತಿದ್ದ ತಟ್ಟೆಯೊಂದಿತ್ತಲ್ಲ ಅದಕ್ಕೆ ಕಾಲ ಕೂಡಿಬಂದಿತ್ತು " ಎಂದನು.

ಕತೆ ೬


ಇದು ಕತ್ತಲಲ್ಲಿ ದೀಪ ಒಯ್ಯುವವನ ಇನ್ನೊಂದು ಕತೆ. ಕತ್ತಲಾಗಿತ್ತು. ಹೊರಗೆ ಬೀದಿಯಲ್ಲಿ ದೀಪಗಳಿರಲಿಲ್ಲ. ಆಕಾಶದಲ್ಲಿ ಚಂದ್ರನ ಬೆಳಕೂ ಇರಲಿಲ್ಲ. ರಸ್ತೆಯಲ್ಲಿ ತಿರುಗುವವರಿಗೆ ತುಂಬ ತೊಂದರೆಯಾಗುತ್ತಿತ್ತು. ಆಗ ಒಬ್ಬಾತ ತನ್ನ ಗೆಳೆಯನ ಮನೆಯಿಂದ ತನ್ನ ಮನೆಗೆ ಹೊರಟ. ಹೊರಗೆ ಹೊರಟವನು ಕುರುಡ. ಮನೆಯೊಡೆಯ ಗೆಳೆಯನ ಬಳಿ ಈ ಕುರುಡು ಗೆಳೆಯ " ಹೊರಗೆ ರಸ್ತೆಯಲ್ಲಿ ಹೋಗಲು ಅನುಕೂಲವಾಗುವಂತೆ ಒಂದು ದೀಪವನ್ನು ಕೊಡು " ಎಂದು ಕೇಳಿದನು. ಗೆಳೆಯ "ಅಯ್ಯಾ, ನಿನಗೇಕೆ ದೀಪ, ಅದು ನಿನ್ನಲ್ಲಿ ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ. ನಿನಗಂತೂ ಅದರ ಬೆಳಕಿನಿಂದ ಬೀದಿ

ಕಾಣಿಸುವುದಿಲ್ಲವಲ್ಲ. ಹೀಗಿರುವಾಗ ದೀಪ ಬೇಕೆ ?" ಕುರುಡ ಗೆಳೆಯ ಆಗ "ಅಪ್ಪಾ, ಕೇಳು. ದೀಪದಿಂದ ನನಗೆ ಏನೂ ಉಪಯೋಗವಾಗುವುದಿಲ್ಲ ನಿಜ. ನಾನು ದೀಪ ತೆಗೆದುಕೊಂಡು ಹೋಗುವುದು ನನಗಲ್ಲ. ನಾನು ಹಾದಿಯಲ್ಲಿ ಹೋಗುವಾಗ ನನ್ನ ಎದುರು ಬರುವವರು ನನಗೆ ಡಿಕ್ಕಿ ಹೊಡೆಯಬಾರದು ತಾನೆ?ಅದಕ್ಕಾಗಿ ಈ ದೀಪ ನನ್ನ ಬಳಿ ಇರುವುದು ಒಳ್ಳೆಯದಲ್ಲವೇ ? ಎಂದನು.

ಮನೆಯಾತ ನೀಡಿದ ದೀಪವನ್ನು ಕೋಲಿಗೆ ಸಿಕ್ಕಿಸಿಕೊಂಡು ಕುರುಡ ಮನುಷ್ಯ ನಡೆದ. ದಾರಿಯಲ್ಲಿ ಒಬ್ಬ ಇವನಿಗೆದುರಾಗಿ ಬಂದು ಡಿಕ್ಕಿ ಹೊಡೆದ. ಕುರುಡನಿಗೆ ತುಂಬಾ ಕೋಪ ಬಂತು. ರೇಗಿ ಕೇಳಿದ "ಏನಯ್ಯಾ, ನಾನಂತೂ ಕುರುಡ. ನನಗೆದುರಾಗಿ ಯಾರು ಬರುತ್ತಾರೆ ಎನ್ನುವುದು ನನಗೆ ಕಾಣಿಸುವುದಿಲ್ಲ. ಆದರೆ ನೀನು ಕಣ್ಣುಳ್ಳವನು ತಾನೆ ? ನಿನಗಾದರೂ ನಾನು ಎದುರಾಗಿ ಬರುತ್ತಿರುವುದು ಕಾಣಬೇಡವೇ ? ಹಾಗೆ ಬೇರೆಯವರಿಗೆ ಕಾಣಲೆಂದು ತಾನೇ ನಾನು ದೀಪ ಹಿಡಿದು ಹೊರಟಿರುವುದು? ಅಥವಾ ನೀನೂ ನನ್ನಂತೆ ಕಣ್ಣುಕಾಣದ ಕುರುಡನೋ ?" ಎದುರು ಬಂದು ಈ ಕುರುಡನಿಗೆ ಡಿಕ್ಕಿ ಹೊಡೆದವನು ಈ ಮಾತು ಕೇಳಿ "ಅಪ್ಪಾ, ನಾನು ಕುರುಡನಲ್ಲ. ಕತ್ತಲಲ್ಲಿ ಹಾದಿ ಕಾಣಿಸುತ್ತಿಲ್ಲ ನಿಜ. ಹಾಗೆ ಕಾಣಿಸಲೆಂದು ನೀನು ದೀಪ ಒಯ್ಯುತ್ತಿರುವುದು ಒಳ್ಳೆಯದೇ ಸರಿ. ಆದರೆ ಆ ದೀಪ ಹತ್ತಿ ಉರಿಯಬಾರದೇ ? ನೀನು ಒಯ್ಯುತ್ತಿರುವುದು ಉರಿಯ ಕುಡಿ ಇಲ್ಲದ ದೀಪವನ್ನು " ಎಂದನು.

ಕತೆ ೭

ಇಬ್ಬರು ಸನ್ಯಾಸಿಗಳು ಹಾದಿಯಲ್ಲಿ ನಡೆದು ಹೋಗುತ್ತಿದ್ದರು. ಇಬ್ಬರೂ ದೊಡ್ಡ ಗುರುವಿನ ಬಳಿ ಹೋಗಿ ಹೆಚ್ಚಿನ ತಿಳಿವಳಿಕೆಯನ್ನು ಪಡೆಯಬೇಕೆಂದುಕೊಂಡವರು. ಅವರಲ್ಲಿ ಚಿಕ್ಕವನಿಗೆ ಮಾತು ಹೆಚ್ಚು. ದೊಡ್ಡವನು ಹೆಚ್ಚು ಮಾತಾಡುವವನಲ್ಲ.



ಇಬ್ಬರೂ ನಡೆದು ಹೋಗುತ್ತಿದ್ದಾಗ ಭಾರಿ ಮಳೆ ಬಂತು. ಒಂದು ಕಡೆ ನಿಂತು ಮಳೆ ನಿಲ್ಲುವುದನ್ನು ಕಾಯ್ದರು. ಅನಂತರ ತೊಯ್ದ ರಸ್ತೆಯಲ್ಲಿ ನಡೆದು ಹೊರಟರು. ದಾರಿಯಲ್ಲಿ ಒಂದು ಚಿಕ್ಕ ಹೊಳೆ ಅಡ್ಡ ಬಂತು. ಸಾಮಾನ್ಯವಾಗಿ ನಡೆದು ದಾಟಬಹುದಾದ ಕಡುವು ಅದು. ಈಗ ತಾನೇ ಸುರಿದ ಮಳೆಯಿಂದಾಗಿ ಕೊಂಚ ನೀರು ಹೆಚ್ಚಾಗಿ ತುಂಬಿ ಹರಿಯುತ್ತಿತ್ತು. ಸನ್ಯಾಸಿಗಳಿಬ್ಬರೂ ಆ ಹೊಳೆಯ ಬಳಿಗೆ ಬಂದರು. ಅಲ್ಲಿ ದಡದಲ್ಲಿ ಒಬ್ಬ ಹೆಂಗಸು ನಡುಗುತ್ತ ಅಳುತ್ತ ಕುಳಿತಿದ್ದಳು. ಚಿಕ್ಕ ವಯಸ್ಸಿನ ಹೆಂಗಸು. ಅವಳು ಆಚೆಯ ದಡಕ್ಕೆ ಹೋಗಬೇಕಿದ್ದವಳು. ಮಳೆಯಲ್ಲಿ ನೆನೆದು ನಿಂತಿದ್ದಳು. ಈಗ ನೋಡಿದರೆ ಹೊಳೆಯಲ್ಲಿ ನೀರು ತುಂಬಿಕೊಂಡಿದೆ. ನಡೆದು ದಾಟ ಬಹುದಾದರೂ ಬಹಳ ಎಚ್ಚರಿಕೆ

ಬೇಕು. ನೀರಿನ ಸೆಳವುಗಳು ಎಲ್ಲಿಯಾದರೂ ಎಳೆಯಬಹುದೆಂಬ ಭಯ. ಒಬ್ಬಂಟಿ ಬೇರೆ. ಸನ್ಯಾಸಿಗಳಿಗೆ ಅವಳ ಪರಿಸ್ಥಿತಿ ಅರಿವಾಯಿತು. ದೊಡ್ಡವನು ಅವಳ ಬಳಿಗೆ ಹೋಗಿ "ಭಯ ಬೇಡ, ನನ್ನ ಹೆಗಲ ಮೇಲೆ ಕುಳಿತುಕೋ. ನಾನು ನಿನ್ನನ್ನು ಎಚ್ಚರದಿಂದ ಒಯ್ದು ಆಚೆ ದಡಕ್ಕೆ ಮುಟ್ಟಿಸುವೆ " ಎಂದನು. ಚಿಕ್ಕವನಿಗೆ ಈ ಮಾತು ಕೇಳಿ ತುಂಬಾ ಕೋಪ ಬಂತು. ಸನ್ಯಾಸಿಯಾಗಿ ಹೆಂಗಸಿನೊಡನೆ ಮಾತಾಡುವುದೆಂದರೇನು ?ಅವಳನ್ನು ಮುಟ್ಟುವುದೆಂದರೇನು? ಸಾಲದು ಎಂಬಂತೆಅವಳನ್ನು ತನ್ನ ಹೆಗಲ ಮೇಲೆ ಕೂರಿಸಿಕೊಂಡು ಹೊಳೆ ದಾಟಿಸುತ್ತೇನೆಂದು ಮಾತಿತ್ತಿದ್ದಾನೆ. ದೊಡ್ಡವನಿಗೆ ಇವನು " ಇದು ಸರಿಯೇ, ಗುರುಗಳು ಇದನ್ನು ತಿಳಿದರೆ ಏನನ್ನುತ್ತಾರೆ ಎಂಬುದು ನಿನ್ನ ಗಮನದಲ್ಲಿದೆಯಾ ? ಈ ಹುಚ್ಚಾಟ ನಿಲ್ಲಿಸು. " ಎಂದು ಹೇಳಿದನು.

ದೊಡ್ಡವನು ಇವನ ಮಾತು ಕೇಳದವನಂತೆ ಮಂಡಿಯೂರಿ ಕುಳಿತು ಆ ಹೆಂಗಸನ್ನು ಹೆಗಲ ಮೇಲೆ ಕೂರಿಸಿಕೊಂಡು ಮುಂದೆ ನಡೆದ. ಚಿಕ್ಕವನಿಗೆ ಇದು ಮತ್ತಷ್ಟು ಕೋಪ ತರಿಸಿತು. ಅವನ ಹಿಂದೆ ಗೊಣಗುತ್ತಲೇ ಹೋದ. ಹೊಳೆಯನ್ನು ದಾಟಿದರು. ದೊಡ್ಡವನು ಆಚೆ ದಡದಲ್ಲಿ ಹೆಂಗಸನ್ನು ಇಳಿಸಿದನು. ಅಲ್ಲಿಂದ ಮುಂದೆ ನಡೆದರು. ಚಿಕ್ಕವನ ಗೊಣಗಾಟ ಮುಂದುವರೆದೇ ಇತ್ತು. ದೊಡ್ಡವನು ಮಾತಾಡದೇ ಸುಮ್ಮನೆ ನಡೆಯುತ್ತಿದ್ದ. ಕೊನೆಗೊಮ್ಮೆ ಚಿಕ್ಕವನಿಗೆ ತಡೆಯಲಾಗದೆ ನಿಂತು ಕೂಗಿ ಕೇಳಿದ."ಸನ್ಯಾಸಿಯಾಗಿ ನೀನು ಆ ಹೆಂಗಸನ್ನು ಹೆಗಲ ಮೇಲೆ ಕೂರಿಸಿಕೊಂಡು ಬಂದೆಯಲ್ಲ, ಇದು ಸರಿಯೇನು ? ನಿನಗೆ ನಾಚಿಕೆ ಎನ್ನುವುದೇ ಇಲ್ಲವೆ ?" ದೊಡ್ಡ ಸನ್ಯಾಸಿ ನಿಲ್ಲದೆ ನಡೆಯುತ್ತಾ ಹೇಳಿದ. "ನಾನು ಆಕೆಯನ್ನು ಹೊಳೆಯ ಬಳಿ ಇಳಿಸಿ ಬಂದೆ. ನೀನು ಮಾತ್ರ ಅವಳನ್ನು ಇನ್ನೂ ಹೊತ್ತುಕೊಂಡಿದ್ದೀಯಾ".

ಕತೆ ೮

ಒಬ್ಬಾತ ಗುರುವಿನ ಬಳಿಗೆ ಬಂದ. ಸಮಯ ನೋಡಿ ಗುರುವಿನ ಬಳಿ ಕುಳಿತ. ಇವನ ಸಮಸ್ಯೆಯನ್ನು ಗುರುವಿನ ಬಳಿ ಹೇಳಿಕೊಳ್ಳಬೇಕೆಂದು ದೂರದ ಊರಿನಿಂದ ಬಂದಿದ್ದ.

"ಗುರುಗಳೇ, ನನಗೆ ದಾರಿ ತೋರಿಸಬೇಕು. ನನಗೆ ತುಂಬಾ ಕೋಪ. ಕೋಪ ಬಂದಾಗ ಮಾಡಬಾರದ ಕೆಲಸವನ್ನು ಮಾಡಿ ಬಿಡುತ್ತೇನೆ. ಅನಂತರ ಕೈಕೈ ಹಿಸುಕಿಕೊಳ್ಳುವಂತಾಗುತ್ತದೆ. ಆದರೆ ಆ ವೇಳೆಗೆ ಕಾಲ ಮಿಂಚಿ ಹೋಗಿರುತ್ತದೆ. ಕೋಪ ಬಾರದಂತೆ ಏನಾದರೂ ಉಪಾಯವನ್ನು ಹೇಳಿ ಕೊಡಬೇಕಲ್ಲ.ಗುರು ಅವನ ಮಾತು ಕೇಳಿ ಕೊಂಚ ಹೊತ್ತು ಬಿಟ್ಟು "ನಿನಗೆ ಕೋಪ ಬಂದ ಕೂಡಲೇ ನನ್ನ ಬಳಿ ಬಂದರೆ ನೋಡಪ್ಪ ಏನಾದರೂ ಮಾಡಬಹುದು" ಎಂದನು. "ಅದು ಆಗದ ಮಾತು ಸ್ವಾಮಿ. ಕೋಪ ಬಂದಾಗ ನಿಮ್ಮ ಬಳಿ ಬರಬೇಕೆಂದು ನನಗೆ ತೋರುವುದು ಹೇಗೆ ? ಒಂದು ವೇಳೆ ನಿಮ್ಮ ಬಳಿ ಆಗ ಬರಬೇಕೆಂದು ತೋಚಿತು ಎಂದುಕೊಳ್ಳೋಣ. ಆದರೆ ನಿಮ್ಮ ಬಳಿ ಬರುವ ವೇಳೆಗೆ ಆ ಕೋಪ ನನ್ನಿಂದ ಹೊರಟುಹೋಗಿರುತ್ತದೆ. ಪರಿಹಾರ ಬೇರೆ ಏನಾದರೂ ಹೇಳಿ " ಎಂದ ಕೋಪಿ. "ಆಯಿತು, ನಿನ್ನ ಕೋಪದ ಕತೆ ಚೆನ್ನಾಗಿದೆ. ಅದರ ಮುಖವನ್ನು ಒಮ್ಮೆ ನೋಡೋಣ. ಅದು ಹೇಗಿರುತ್ತದೆ ಒಮ್ಮೆ ತೋರಿಸು "ಎಂದು ಗುರು ಕೇಳಿದ.

"ಈಗ ಕೋಪ ಇಲ್ಲವಲ್ಲ. ಹಾಗಾಗಿ ನಿಮಗದನ್ನು ಹೇಗೆ ತೋರಿಸಲಿ".

"ನಿನಗೆ ಬಂದಾಗ ಅದನ್ನು ತೋರಿಸಲು ಬರುವುದು ಸಾಧ್ಯವಿಲ್ಲ. ಬೇಕೆಂದಾಗ ಅದು ನಿನ್ನಲ್ಲಿ ಬರುವಂತೆ ಮಾಡಿಕೊಳ್ಳಲು ನಿನಗೆ ಆಗದು. ಅಂದ ಮೇಲೆ ಅದು ನಿನ್ನ ಒಳಗಿಲ್ಲವೆಂದಾಯ್ತು. ಅದು ಹೊರಗಿನಿಂದ ಎಲ್ಲಿಂದಲೋ ಬರುತ್ತಿದೆ. ಈ ಕೋಲು ತೆಗೆದುಕೋ. ಆ ಕೋಪ ನಿನ್ನ ಒಳಗೆ ಬರುತ್ತಿದೆ ಎಂದು ನಿನಗೆ ಅನಿಸಿದ ಕೂಡಲೇ ಈ ಕೋಲಿನಿಂದ ಹೊಡೆ. ಹೊಡೆತ ಅಂತಿಂತದಾಗಿದ್ದರೆ ಸಾಲದು. ಕೋಲು ಮುರಿಯುವಷ್ಟು ಜೋರಾಗಿ ಹೊಡೆಯಬೇಕು. ಆಗ ನೋಡಪ್ಪ ಆ ಕೋಪ ನಿನ್ನ ಬಳಿಗೆ ಬರುವುದನ್ನು ಬಿಡುತ್ತದೆ "ಎಂದನು.

ಕತೆ ೯

ಈ ಕತೆ ನಡೆದದ್ದು ಬಹು ಹಿಂದೆ. ಆಗ ಜನರಿಗೆ ಬೇಕಾದ ವಿಚಾರಗಳನ್ನು ಗುರುಗಳೇ ವಿವರಿಸಿ ಹೇಳಬೇಕಿತ್ತು. ಗುರುಗಳು ಬಂದು ತಮಗೆ ಬುದ್ಧಿಯ ಮಾತುಗಳನ್ನು

ಹೇಳುವುದನ್ನೇ ಜನರು ಕಾಯುತ್ತಾ ಇರುತ್ತಿದ್ದರು. ಗುರುಗಳಿಗೆ ಎಲ್ಲ ಕಡೆಗೂ ಹೋಗಿ ಜನರಿಗೆ ಬೇಕೆನಿಸುವಷ್ಟು ಕಾಲ ಇದ್ದು ಮಾತಾಡಿ ಬರುವುದು ಸಾಧ್ಯವಾಗುತ್ತಿರಲಿಲ್ಲ. ಇದನ್ನು ಕಂಡು ಗುರುವೊಬ್ಬರು ಜನರಿಗೆ ತಿಳಿಯುವಂತೆ ಎಲ್ಲವನ್ನು ಬರೆದಿಟ್ಟರೆ ಆ ಪುಸ್ತಕಗಳನ್ನು ಜನರು ಓದಿಕೊಳ್ಳಬಹುದೆಂದು ಭಾವಿಸಿದರು. ಆ ಕಾಲದಲ್ಲಿ ಪುಸ್ತಕಗಳನ್ನು ಬರೆಯುವುದಾಗಲೀ ಅದರ ಪ್ರತಿಗಳನ್ನು ತೆಗೆಯುವುದಾಗಲೀ ಸುಲಭವಾಗಿರಲಿಲ್ಲ. ತುಂಬ ಕಷ್ಟದ ಕೆಲಸ. ಸಮಯ ಹಿಡಿಯುತ್ತಿತ್ತು. ಮಾತ್ರವಲ್ಲ, ಅದಕ್ಕೆ ಸಾಕಷ್ಟು ಹಣ ಕೂಡ ಬೇಕಾಗುತ್ತಿತ್ತು. ಗುರು ಜನರ ಬಳಿಗೆ ಹೋಗಿ ಊರೂರು ತಿರುಗಿ ಜನರಿಂದ ಹಣವನ್ನು ಕೂಡಿಹಾಕಲು ಮೊದಲು ಮಾಡಿದರು. ಹಣ ಒಂದೆಡೆ ಸೇರತೊಡಗಿತು. ಸಾಕಷ್ಟು ಹಣ ಸೇರಿದೆ ಎಂದು ತೋರಿದ ಮೇಲೆ ಗುರುಗಳು ಪುಸ್ತಕದ ಸಿದ್ಧತೆಗೆ ತೊಡಗಿದರು. ಪುಸ್ತಕ ರಚನೆಯಾಯಿತು. ಇನ್ನು ಪ್ರತಿಗಳನ್ನು ತೆಗೆಸುವ ಕೆಲಸ ಉಳಿದಿತ್ತು.

ಆಗ ಆ ದೇಶದಲ್ಲಿ ಬರಬಾರದ ಮಳೆ ಬಂದು ನದಿಯಲ್ಲಿ ನೆರೆ ಬಂತು. ಗುರುಗಳ ಪುಸ್ತಕ ಹಾಳಾಯಿತು. ಊರುಗಳು ಮುಳುಗಿಹೋದವು. ಜನರು ಮನೆಮಠ ಕಳೆದುಕೊಂಡರು. ಆಗ ಗುರುಗಳು ಜನರ ಗೋಳನ್ನು ಪರಿಹರಿಸಲು ತಮ್ಮ ಕೂಡಿಹಾಕಿದ್ದ ಹಣವನ್ನು ಬಳಸಿದರು. ಹಸಿದ ಜನರಿಗೆ ಉಣ ಬಡಿಸಿದರು.

ಗುರುಗಳು ಮತ್ತೆ ಹಣ ಕೂಡಿ ಹಾಕತೊಡಗಿದರು. ಹಣ ಒಂದೆಡೆ ಸೇರಿತು. ಗುರುಗಳು ಮತ್ತೆ ಪುಸ್ತಕವನ್ನು ಬರೆದರು. ಅದನ್ನು ಪ್ರತಿ ಮಾಡಿಸುವ ಕೆಲಸಕ್ಕೆ ತೊಡಗಿದರು. ಮತ್ತೆ ದೇಶಕ್ಕೆ ಕಷ್ಟ ಬಂತು. ಈ ಬಾರಿ ಬರಗಾಲ. ಜನರು ತಿನ್ನಲು ಅನ್ನವಿಲ್ಲದೆ ಊರೂರು ತಿರುಗ ತೊಡಗಿದರು. ಗುರುಗಳು ಮತ್ತೆ ತಮ್ಮಲ್ಲಿದ್ದ ಹಣವನ್ನು ಗೋಳಾಡುವ ಜನರಿಗೆ ಬಳಸತೊಡಗಿದರು. ನೆರವು ಬೇಕೆಂದವರಿಗೆ ಅವರಿದ್ದಲ್ಲಿಗೆ ಹೋಗಿ ನೆರವಾದರು. ಹಣವೆಲ್ಲ ಮುಗಿಯಿತು.

ಗುರುಗಳು ಮತ್ತೆ ಹಣ ಕೂಡಿಹಾಕತೊಡಗಿದರು. ಈ ಬಾರಿ ಹಣ ಸೇರಿತು. ಗುರುಗಳು ಪುಸ್ತಕವನ್ನು ಮತ್ತೆ ಬರೆದರು. ಅವುಗಳ ಪ್ರತಿಗಳನ್ನು ತೆಗೆಸಿದರು. ಜನರಿಗೆ

ಹಂಚಿದರು. ತಾವು ಬಯಸಿದ ಕೆಲಸ ಮುಗಿಸಿದ ಭಾವನೆಯನ್ನು ಪಡೆದರು. ಆಗ ಪ್ರತಿ ಮಾಡಿಸಿದ ಪುಸ್ತಕಗಳನ್ನು ಈಗಲೂ ಜನ ಓದುತ್ತಾರೆ. ಆದರೆ ಗುರುಗಳ ಜತೆಗಿದ್ದವರು ಹೇಳಿದ ಕತೆಗಳ ಪ್ರಕಾರ ಅವರು ಮೊದಲು ಬರೆದಿದ್ದ ಪುಸ್ತಕಗಳು ಈಗಿರುವ ಪುಸ್ತಕಕ್ಕಿಂತ ಉತ್ತಮವಾಗಿದ್ದವಂತೆ . ಗಹನವಾದ ವಿಚಾರಗಳನ್ನು ಅಲ್ಲಿ ಗುರುಗಳು ಹೇಳಿದ್ದರಂತೆ. ಆದರೇನು ಆ ಎರಡು ಪುಸ್ತಕಗಳು ಬೆಳಕು ಕಾಣಲೇ ಇಲ್ಲವಲ್ಲ.

ಕತೆ ೧೦

ಒಂದು ಊರು. ಅಲ್ಲಿ ಎರಡು ಮಠಗಳು. ಸುಮ್ಮನೆ ಒಂದನ್ನು ನಾವು ಮೇಲಿನ ಬೀದಿ ಮಠ ಎನ್ನೆನ್ನೇ. ಇನ್ನೊಂದನ್ನು ಕೆಳಗಿನ ಬೀದಿ ಮಠ ಎನ್ನಿ. ಎರಡೂ ಮಠಗಳಿಗೆ ಇಬ್ಬರು ಗುರುಗಳು. ಆಯಾ ಗುರುಗಳಿಗೆ ಒಬ್ಬೊಬ್ಬ ಶಿಷ್ಯ.

ಒಂದು ದಿನ ಎರಡೂ ಮಠದ ಶಿಷ್ಯರು ಬೀದಿ ತಿರುಗಲು ಹೊರಟರು. ದಾರಿಯಲ್ಲಿ ಇಬ್ಬರ ಮುಖಾಬಿಲೆಯಾಯಿತು. ಮೇಲಿನ ಮಠದ ಶಿಷ್ಯನನ್ನು ಇನ್ನೊಬ್ಬ ಶಿಷ್ಯ ಕೇಳಿದ "ಏನಯ್ಯಾ ಎಲ್ಲಿಗೆ ಹೊರಟೆ ?"

"ನನ್ನ ಕಾಲುಗಳು ನನ್ನನ್ನು ಎಲ್ಲಿಗೆ ಒಯ್ಯುತ್ತವೋ ಅಲ್ಲಿಗೆ " ಎಂದ ಆ ಶಿಷ್ಯ. ಈ ಉತ್ತರವನ್ನು ಕೇಳಿ ಅದನ್ನೇ ಮನನ ಮಾಡುತ್ತ ಹುಡುಗ ಮಠಕ್ಕೆ ಹಿಂತಿರುಗಿದ. ಮಠದಲ್ಲಿ ಶಿಷ್ಯ ಈ ಸಂಗತಿಯನ್ನು ತನ್ನ ಗುರುವಿಗೆ ಹೇಳಿದ. ಗುರು ಅದನ್ನು ಕೇಳಿದವನೇ "ಇರಲಿ ಇರಲಿ. ನಾಳೇ ಅದೇ ಬೀದಿಯಲ್ಲಿ ತಿರುಗಾಡುತ್ತಿರು. ಅವನು ಮತ್ತೆ ಬರುತ್ತಾನೆ. ಅವನ ಬಳಿ ಇದೇ ಪ್ರಶ್ನೆಯನ್ನು ಕೇಳು. ಅವನು ಈ ದಿನ ಕೊಟ್ಟ ಉತ್ತರವನ್ನೇ ಕೊಡುತ್ತಾನೆ. ಆಗ ನೀನು 'ಒಂದು ವೇಳೆ ನಿನಗೆ ಕಾಲುಗಳಿಲ್ಲದಿದ್ದರೆ ಆಗ ?' ಎಂದು ಕೇಳು ಆಗ ಅವನಿಗೆ ಬುದ್ಧಿ ಬರುತ್ತದೆ. ಬಲು ಜಾಣ ಎಂದುಕೊಂಡಿದ್ದಾನೆ ಅವನು " ಎಂದು ಹೇಳಿಕೊಟ್ಟ.

ಶಿಷ್ಯನಿಗೆ ಗುರುವಿನ ಮಾತು ಕೇಳಿ ಸಂತೋಷವಾಯಿತು. ಮಾರನೆ ದಿನ ಗುರು ಹೇಳಿದಂತೆ ಅದೇ ಬೀದಿಯಲ್ಲಿ ತಿರುಗಾಡುತ್ತ ಹೊರಟ. ಇವನು ತಿಳಿದುಕೊಂಡಿದ್ದಂತೆ ಮೇಲಿನ ಮಠದ ಶಿಷ್ಯ ಮತ್ತೆ ಆ ದಿನವೂ ಬೀದಿಯಲ್ಲಿ ಬಂದ. ಕೆಳಗಿನ ಮಠದ ಶಿಷ್ಯ ಜಂಭದಿಂದ ಬೀಗುತ್ತ ಎದುರು ಬಂದವನನ್ನು ಕೇಳಿದ. " ಎಲ್ಲಿಗೆ ಹೋಗುತ್ತಿದ್ದೀಯಾ ?"

ಆ ಹುಡುಗ ನಿನ್ನೆ ಹೇಳಿದ್ದನ್ನೇ ಹೇಳುತ್ತಾನೆ ಎಂದು ಕಾಯ್ದು ಕೊಂಡಿದ್ದ ಈ ಕೆಳಗಿನ ಮಠದ ಹುಡುಗ.

ಆದರೆ ಅವನು "ಗಾಳಿ ಎಲ್ಲಿಗೆ ಒಯ್ಯುತ್ತದೋ ಅಲ್ಲಿಗೆ" ಎಂದು ಉತ್ತರ ಕೊಟ್ಟು ತನ್ನ ಪಾಡಿಗೆ ತಾನು ಮುಂದೆ ನಡೆದ. ಈ ಹುಡುಗನಿಗೆ ಈ ಉತ್ತರ ಕೇಳಿ ಗಲಿಬಿಲಿಯಾಯಿತು. ಅದನ್ನೇ ಮನನ ಮಾಡುತ್ತ ಮಠಕ್ಕೆ ಹೋದ. ಸಂಜೆ ಗುರುವಿನ ಭೇಟಿಯಾಯಿತು. ಬೆಳಿಗ್ಗೆ ಏನಾಯಿತೆಂಬುದನ್ನು ಗುರುವಿಗೆ ವರದಿ ಮಾಡಿದ.

ಈ ಮಾತುಗಳನ್ನು ಕೇಳಿ ಗುರು "ಓಹೋ, ಹೀಗಂತೋ. ನಾಳೆ ಮತ್ತೆ ಅದೇ ಬೀದಿಯಲ್ಲಿ ತಿರುಗಾಡಲು ಹೋಗು. ಆ ಹುಡುಗ ತಿರುಗಾಡಲು ಬಂದೇ ಬರುತ್ತಾನೆ. ಅವನ ಬಳಿ ಈ ಹಿಂದೆ ಕೇಳಿದ ಪ್ರಶ್ನೆಯನ್ನೇ ಕೇಳು. ಅವನು ನಿನ್ನೆ ಹೇಳಿದ ಉತ್ತರವನ್ನೇ ಹೇಳುತ್ತಾನೆ. ಆಗ ನೀನು 'ಒಂದು ವೇಳೆ ಗಾಳಿಯೇ ಇಲ್ಲದಿದ್ದರೆ ಏನು ಮಾಡುವಿ ?' ಎಂದು ಕೇಳು. ಈ ಪ್ರಶ್ನೆ ಕೇಳಿದ ಮೇಲಂತೂ ಅವನು ದಿಕ್ಕು ತಪ್ಪುತ್ತಾನೆ. ಅವನ ಜಂಭವೆಲ್ಲ ಅಡಗುತ್ತದೆ " ಎಂದು ಹೇಳಿಕೊಟ್ಟನು. ಗುರುವಿನ ಈ ಮಾತು ಕೇಳಿ ಹುಡುಗನಿಗೆ ತಾನು ಈಗಾಗಲೇ ಗೆದ್ದಷ್ಟು ಸಂತೋಷವಾಯಿತು.

ಮಾರನೆ ದಿನ ಕುಣಿಯುತ್ತ ಹೊರಟ. ಅದೇ ಬೀದಿ. ಅದೇ ಹೊತ್ತು. ಎದುರಾಗಿ ಅದೇ ಮೇಲಿನ ಮಠದ ಹುಡುಗ ಬಂದ. ಅವನು ಹತ್ತಿರ ಬರುತ್ತಿದ್ದಂತೆ ಇವನು "ಎಲ್ಲಿಗೆ ಹೊರಟೆ ಈ ದಿನ ?" ಎಂದು ಕೇಳಿದ. ಆ ಹುಡುಗ ಕೊಡಬಹುದಾದ ಉತ್ತರವನ್ನು ಕಾಯುತ್ತ ನಿಂತ. ಹಿಂದಿನ ದಿನದ ಉತ್ತರವನ್ನೇ ಹೇಳಿದರೆ ತಾನು ಕೇಳಬೇಕಾದ ಪ್ರಶ್ನೆಯನ್ನು ನಾಲಿಗೆಯ ತುದಿಯಲ್ಲಿ ಇರಿಸಿಕೊಂಡಿದ್ದ. ಮೇಲಿನ ಮಠದ

ಹುಡುಗ ಸುಮ್ಮನೆ "ಎಲ್ಲೂ ಇಲ್ಲ, ಇಲ್ಲೆ ತರಕಾರಿ ಕೊಳ್ಳಲು ಹೊರಟೆ " ಎಂದು ಹೇಳಿ ಮುಂದೆ ಹೋದ.

ಕತೆ ೧೧

ಈ ಕತೆಯಲ್ಲಿ ಇನ್ನೊಬ್ಬ ಗುರು ಬರುತ್ತಾನೆ. ಅವನ ಬಳಿಗೆ ಒಂದು ದಿನ ಒಬ್ಬ ತರುಣ ಬಂದ. ಅವನ ಮುಖದಲ್ಲಿ ನಿರಾಸೆ ತುಂಬಿತ್ತು. ಜಗತ್ತೇ ತನಗೆ ಬೇಡವೆಂಬಂತೆ ಇದ್ದ. ಗುರುವಿನ ಬಳಿ ನಿಂತು " ಸ್ವಾಮಿ ಗುರುಗಳೇ, ನನಗೆ ನೀವು ನೆರವಾಗಬೇಕು. ನನಗೆ ಹೆಚ್ಚೇನೂ ವಯಸ್ಸಾಗಿಲ್ಲ. ಆದರೂ ಜೀವನದಲ್ಲಿ ಏನೂ ಸಾಧಿಸಲು ಸಾಧ್ಯವಾಗಲಿಲ್ಲ ಎನ್ನುವ ನಿರಾಶೆ ನನ್ನನ್ನು ಕಾಡುತ್ತಿದೆ. ಯಾವ ಕೆಲಸವನ್ನು ಮಾಡ ಹೊರಟರೂ ಕೊಂಚ ಕಾಲ ಕಳೆಯುವುದರೊಳಗೆ ಅದರಲ್ಲಿ ನನಗೆ ಆಸಕ್ತಿ ಹೊರಟುಹೋಗುತ್ತದೆ. ಅದನ್ನು ಬಿಟ್ಟು ಬೇರೇನನ್ನೋ ಮಾಡತೊಡಗುತ್ತೇನೆ. ಅದರಲ್ಲಿ ಮನಸ್ಸು ತೊಡಗುವುದರೊಳಗೆ ಅದರಲ್ಲೂ ನನಗೆ ಆಸಕ್ತಿ ಕಡಿಮೆಯಾಗುತ್ತದೆ. ಅದನ್ನೂ ನಡುವೆಯೇ ಬಿಟ್ಟು ಹೊರಡುತ್ತೇನೆ. ಹೀಗಾಗಿ ಏನನ್ನಾದರೂ ಸಾಧಿಸಿದ ತೃಪ್ತಿ ನನಗೆ ಸಿಗುತ್ತಿಲ್ಲ." ಎಂದು ಹೇಳಿಕೊಂಡನು.

ಗುರುವು "ನಿನ್ನ ಹೊಟ್ಟೆಪಾಡಿಗೆ ಏನು ಮಾಡುತ್ತಿ?"ಎಂದು ಕೇಳಿದರು. " ಹಾಗೆ ನೋಡಿದರೆ ಜೀವನಕ್ಕಾಗಿ ನಾನು ಏನನ್ನೂ ಮಾಡಬೇಕಾಗಿಲ್ಲ. ಅದಕ್ಕೆ ಬೇಕಾಗುವಷ್ಟು ಹಣ ನನ್ನ ಬಳಿ ಇದೆ " ಎಂದು ಹುಡುಗ ಹೇಳಿದ.

" ಹಾಗಾದರೆ ನೀನು ಜೀವನದಲ್ಲಿ ತುಂಬ ಇಷ್ಟ ಪಟ್ಟ ಸಂಗತಿಯಾವುದೂ ಇಲ್ಲವೆ ?" ಗುರುವಿನ ಪ್ರಶ್ನೆ."ನಾನು ಬಯಸಿ ಕಲಿತದ್ದು ಚದುರಂಗದ ಆಟವನ್ನು ಮಾತ್ರ. ಅದನ್ನು ನಾನು ಆಡಬಲ್ಲೆ. ಸಾಕಷ್ಟು ಚೆನ್ನಾಗಿಯೂ ಆಡಬಲ್ಲೆ" ಎಂದು ತರುಣ ಹೇಳಿದ.

"ಹಾಗಿದ್ದಲ್ಲಿ ನಿನಗೆ ನಾನು ನೆರವಾಗಬಲ್ಲೆನೆಂದು ತೋರುತ್ತದೆ. " ಎಂದು ಗುರು ಹೇಳಿದರು. ಆ ಗುರುವಿನ ಬಳಿ ಬಹುದಿನಗಳಿಂದ ಶಿಷ್ಯನೊಬ್ಬ ವಾಸಿಸುತ್ತಿದ್ದ. ಅವನಿಗೆ

ಗುರುವನ್ನು ಕಂಡರೆ ತುಂಬ ಗೌರವ. ಅವನನ್ನು ಬರಲು ಹೇಳಿ ಕಳುಹಿಸಿದರು. ಆತ ಬಂದ. ಗುರು ಅವನನ್ನು ಹತ್ತಿರ ಕರೆದು "ನನ್ನ ಬಗ್ಗೆ ನಿನಗೆ ತುಂಬ ಗೌರವ ತಾನೆ? ನೀನು ಚದುರಂಗವನ್ನು ಆಡಬೇಕು. ಚೆನ್ನಾಗಿ ಮನಸ್ಸಿಟ್ಟು ಆಡಬೇಕು. ಈ ಆಟದಲ್ಲಿ ನೀನು ಸೋತರೆ ಇಗೋ ಈ ಕತ್ತಿಯನ್ನು ನೋಡಿದ್ದೀ ತಾನೆ? "ಇದರಿಂದ ನಿನ್ನ ಕತ್ತನ್ನು ಹಾರಿಸುತ್ತೇನೆ. ನೆನಪಿರಲಿ" ಎಂದು ಹೇಳಿದ ಆ ತರುಣನಿಗೂ ಆಟದ ಶರತ್ತನ್ನು ತಿಳಿಸಿದ. ತರುಣ ಒಪ್ಪಿದ. ಶಿಷ್ಯ ತನ್ನ ಗುರುವಿಗೆ ತಲೆ ಬಾಗಿ ಆಟಕ್ಕೆ ಕುಳಿತ. ಆಟ ಮೊದಲಾಯಿತು. ತರುಣ ಜಾಣ ಆಟಗಾರ. ಒಳ್ಳೆಯ ನಡೆಗಳನ್ನು ಮಾಡಿದ. ಶಿಷ್ಯನೂ ಒಳ್ಳೆಯ ಆಟಗಾರನೇ. ಅವನ ಆಟದಲ್ಲೂ ಒಳ್ಳೆಯ ನಡೆಗಳಿದ್ದವು. ತರುಣ ತನ್ನ ಎಲ್ಲ ಗಮನವನ್ನು ಆಟದಲ್ಲೇ ಇರಿಸಿ ಆಡತೊಡಗಿದ. ಮೈ ಸೆಟೆದುಕೊಂಡಿತ್ತು. ಹುಬ್ಬುಗಂಟಿಕ್ಕಿ ಆಡುತ್ತಿದ್ದ. ಕೆಲವು ನಡೆಗಳಲ್ಲೇ ಆಯಾಸ ತಲೆದೋರಿತು. ಮೈ ಬೆವರತೊಡಗಿತು.

ಆಟ ಆಡುತ್ತಿದ್ದಂತೆಯೇ ತರುಣ ಎದುರು ಕುಳಿತ ಸನ್ಯಾಸಿಯ ಮುಖ ನೋಡಿದ. ಅವನ ಮುಖ ಶಾಂತವಾಗಿತ್ತು. ಆಟದಲ್ಲಿ ಶಿಷ್ಯ ಒಂದು ತಪ್ಪು ನಡೆಯನ್ನು ಮಾಡಿದ. ಇದು ತರುಣನಿಗೆ ಗೊತ್ತಾಯಿತು. ಅದರ ಉಪಯೋಗವನ್ನು ಮಾಡಿಕೊಳ್ಳಲು ಮೊದಲು ಮಾಡಿದ. ನಡೆಗಳು ಸಾಗಿದಂತೆ ಶಿಷ್ಯ ಸೋಲುವುದು ಗಟ್ಟಿಯಾಯಿತು. ಅವನ ಬಲ ಕುಗ್ಗ ತೊಡಗಿತು. ಈಗ ತರುಣನ ಮೈ ಸಡಿಲಾಯಿತು. ಉಸಿರಾಟ ಸಲೀಸಾಯಿತು. ಕತ್ತೆತ್ತಿ ಎದುರು ಕುಳಿತ ಸನ್ಯಾಸಿಯ ಮುಖ ನೋಡಿದ. ಅವನ ಮುಖದಲ್ಲಿ ಯಾವ ಬದಲಾವಣೆಯೂ ಇರಲಿಲ್ಲ. ಮೊದಲಿದ್ದಂತೆಯೇ ಇತ್ತು. ತನ್ನ ನಡೆಗಳನ್ನು ಯೋಚಿಸಿಯೇ ನಡೆಸುತ್ತಿದ್ದ. ಸೋಲುವ ಭಯ, ಆತಂಕಗಳು ಕಾಣಲಿಲ್ಲ. ತರುಣನಿಗೆ ಇದ್ದಕ್ಕಿದ್ದಂತೆ ಏನೋ ತೋಚಿತು. ಮುಂದಿನ ನಡೆಗಳಲ್ಲಿ ಬೇಕೆಂದೇ ತಪ್ಪುಗಳನ್ನು ಮಾಡತೊಡಗಿದ. ಸುಲಭವಾಗಿದ್ದ ನಡೆಗಳಲ್ಲೂ ತಪ್ಪುಗಳು. ತರುಣ ಸೋಲುವುದು ಖಚಿತವಾಗುತ್ತಿತ್ತು.

ಆಟವನ್ನು ಗುರು ಬಳಿಯೇ ಕುಳಿತು ನೋಡುತ್ತಿದ್ದರು. ಈ ಗಳಿಗೆಯಲ್ಲಿ ಸುಮ್ಮನೆ ಮುಂದೆ ಬಂದು ಆಟದ ಹಲಗೆಯನ್ನು ಎಳೆದು ಅದರ ಮೇಲಿದ್ದ ಚದುರಂಗದ ಕಾಯಿಗಳೆಲ್ಲ ಚೆಲ್ಲಾಪಿಲ್ಲಿಯಾಗುವಂತೆ ಮಾಡಿದರು. ತರುಣನಿಗೆ ಗಲಿಬಿಲಿಯಾಯಿತು.



ಪಂದ್ಯದಲ್ಲಿ ಸೋತವನ ಕತ್ತನ್ನು ಹಾರಿಸುವುದು _ ಗುರುವಿನ ಷರತ್ತು

ಗುರು ಆಗ " ಆಟದಲ್ಲಿ ಗೆಲುವು ಸೋಲುಗಳಿಲ್ಲ. ಪ್ರಾಣಭಯದಿಂದ ನೀನು ಈ ದಿನ ಆಡಲು ಮೊದಲು ಮಾಡಿದೆ. ನೀನು ಕಲಿಯಲೇ ಬೇಕಿದ್ದ ಪಾಠಗಳು ಎರಡಿದ್ದವು. ಒಂದು ಮನಸ್ಸನ್ನು ಒಂದು ಕಡೆಗೆ ಗಮನವಿರಿಸುವಂತೆ ಮಾಡುವುದು. ಇನ್ನೊಂದು ಬೇರೆಯವರ ಬಗೆಗೆ ಕರುಣೆಯನ್ನು ಬೆಳೆಸಿಕೊಳ್ಳುವುದು. ಆಡುತ್ತಿದ್ದಾಗ ಸೋಲಿನ ಭಯದಿಂದ ನೀನು ನಿನ್ನ ಮನಸ್ಸಿನ ಶಕ್ತಿಯನ್ನೆಲ್ಲ ಒಂದೇ ಕಡೆಗೆ ಇರಿಸಿದೆ. ಇದರಿಂದ ಮೊದಲ ಪಾಠವನ್ನು ಕಲಿತೆ. ಆದರೆ ಸೋಲಲಿರುವ ಎದುರಾಳಿಯನ್ನು ಕಂಡಾಗ ನಿನ್ನಲ್ಲಿ ಮೂಡಿದ ಭಾವಗಳು ಬೇರೆ. ನಿನಗಾಗಿ ಆತ ಪ್ರಾಣ ಕಳೆದುಕೊಳ್ಳುತ್ತಿದ್ದಾನೆಂದು ನಿನಗೆ ತೋರಿತು. ಅವನ ಬಗೆಗೆ ನಿನ್ನಲ್ಲಿ ಕರುಣೆ ಮೂಡಿತು. ಪ್ರೀತಿ ತುಂಬಿತು. ಆಗ ನೀನು ಸೋಲಲು ಸಿದ್ಧನಾದೆ. ಹಾಗೆ ಸೋಲುವುದರಿಂದ ನೀನು ಸಾಯುವುದು ನಿನಗೆ ಗೊತ್ತಿತ್ತು. ಆದರೆ ಅದರಿಂದ ಎದುರಾಳಿಯನ್ನು ಉಳಿಸಬಹುದೆಂದು ತಿಳಿದು ಹಾಗೆ ಮಾಡಿದೆ. ನೀನು ಕಲಿಯ ಬೇಕಿದ್ದುದು ಇಷ್ಟೆ. ಹೋಗಿ ಬಾ " ಎಂದು ಹೇಳಿ ಅವನನ್ನು ಬೀಳುಕೊಟ್ಟನು.

ಕತೆ ೧೨

ಗುರುವಿನ ಬಳಿ ಒಬ್ಬ ಬಂದು ಕೇಳುತ್ತಾನೆ. " ಗುರುವೇ ದಾರಿ ಯಾವುದು ?"

"ಅಯ್ಯಾ, ಅದು ನಿನ್ನ ಕಣ್ಣ ಎದುರಲ್ಲೇ ಇದೆ " ಎನ್ನುತ್ತಾನೆ ಗುರು.

" ಹಾಗಿದ್ದಲ್ಲಿ ನನಗೇಕೆ ಅದು ಕಾಣಿಸುತ್ತಿಲ್ಲ. "

"ನೀನು ದಾರಿಯ ಬಗ್ಗೆ ಯೋಚಿಸುತ್ತಿಲ್ಲ, ನಿನ್ನ ಬಗೆಗೆ ಚಿಂತಿಸುತ್ತಿದ್ದಿ, ಅದಕ್ಕೆ "

" ಹಾಗಿದ್ದಲ್ಲಿ ನಿಮಗೆ ಕಾಣಿಸುತ್ತದೋ ?"

"ಎಲ್ಲಿಯವರೆಗೆ 'ನನಗೆ ಕಾಣಿಸುವುದಿಲ್ಲ, ನಿನಗೆ ಕಾಣಿಸುತ್ತದೆ' ಎಂಬಂತೆ ಯೋಚಿಸುತ್ತಿಯೋ, ಎಲ್ಲಿಯವರೆಗೆ ಎಲ್ಲವೂ ನಿನಗೆ ಎರಡಾಗಿ ಕಾಣುತ್ತದೋ ಅಲ್ಲಿಯವರೆಗೆ ನಿನ್ನ ಕಣ್ಣುಗಳಿಗೆ ಮಂಜು ಮುಸುಕಿರುತ್ತದೆ. "

"'ನಾನು'ಅಥವಾ 'ನೀನು' ಎಂಬುದು ಅಳಿದ ಮೇಲೆ ನನಗೆ ದಾರಿ ಕಾಣಿಸಬಹುದೋ?"

"ಯಾವಾಗ 'ನಾನು' ಅಥವಾ 'ನೀನು'ಇಲ್ಲವೋ ಆಗ ದಾರಿಯನ್ನು ಕಾಣುವವರು ಯಾರು ?" ಗುರುವಿನ ಮರು ಪ್ರಶ್ನೆ.

ಕತೆ ೧೩

ಒಂದೂರಿನಲ್ಲಿ ಒಬ್ಬ ಮನುಷ್ಯನಿದ್ದ. ಅವನಿಗೆ ಒಳ್ಳೆಯ ಕತ್ತಿವರಸೆಯವನಾಗಬೇಕೆಂಬ ಆಸೆ. ಅದಕ್ಕಾಗಿ ಒಳ್ಳೆಯ ಗುರುವೊಬ್ಬನಿಗಾಗಿ ಹುಡುಕುತ್ತಿದ್ದ. ದೂರದ ಊರಿನಲ್ಲಿ ಅಂಥ ಗುರುವೊಬ್ಬರಿದ್ದಾರೆ ಎನ್ನುವ ಸುದ್ದಿ ಅವನ ಕಿವಿಗೆ ಬಿತ್ತು. ಆ ಗುರುವನ್ನು ಹುಡುಕಿಕೊಂಡು ಹೊರಟ. ಗುರುವಿರುವ ಊರನ್ನು ತಲುಪಿದ. ಸಮಯ ನೋಡಿ ಗುರುವನ್ನು ಭೇಟಿ ಮಾಡಿ ಮಾತು ಮೊದಲು ಮಾಡಿದ.

"ಗುರುವೇ, ತಾವು ಕತ್ತಿವರಸೆಯಲ್ಲಿ ನಿಪುಣರೆಂಬುದನ್ನು ಕೇಳಿಬಲ್ಲೆ. ಬಹಳ ದಿನಗಳಿಂದ ನಿಮ್ಮನ್ನು ಗುರುವಾಗಿ ಪಡೆದು ಕತ್ತಿವರಸೆಯನ್ನು ಕಲಿಯಬೇಕೆಂದಿದ್ದೇನೆ. ದಯವಿಟ್ಟು ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಕೋರುತ್ತೇನೆ "

ಇವನನ್ನು ನೋಡಿದ ಗುರು ಮಾತಾಡದೆ ಸುಮ್ಮನಿದ್ದರು. ಅವರ ಮೌನವನ್ನು ಒಪ್ಪಿಗೆ ಒಂದು ತಿಳಿದ ಈತ ಅವರನ್ನು ಕುರಿತು ಹೀಗೆ ಕೇಳಿದ.

" ನಾನು ಕತ್ತಿವರಸೆಯ ಎಲ್ಲ ತಂತ್ರಗಳನ್ನು ಕಲಿತು ಪರಿಣಿತನಾಗಲು ಎಷ್ಟು ಸಮಯ ಬೇಕಾಗಬಹುದು?"

ಗುರು ಅವನ ಮಾತಿಗೆ ಹೀಗೆ ಹೇಳಿದರು. "ಸುಮಾರು ಮೂವತ್ತು ವರ್ಷ" ಬಂದವನಿಗೆ ಈ ಮಾತು ಕೇಳಿ ಬೇಸರವಾಯಿತು. " ಅಯ್ಯೋ, ಅಷ್ಟು ಕಾಲ ನಾನು ಕಲಿಯುತ್ತ ಕೂತರೆ ಹೇಗೆ ? ಕಲಿತು ಹಿಂತಿರುಗಿ ಹೋಗಿ ನನ್ನ ವ್ಯವಹಾರಗಳನ್ನು

ನೋಡಿಕೊಳ್ಳಬೇಕು. ವಯಸ್ಸಾದ ನನ್ನ ತಂದೆಯ ಸೇವೆಯನ್ನು ಮಾಡಬೇಕು. ಬೇಗ ಎಲ್ಲವನ್ನು ಕಲಿಯುವ ಬಗೆ ಯಾವುದೂ ಇಲ್ಲವೇ ? ಬೇಕಾದರೆ ನಾನು ಎರಡರಷ್ಟು ಸಮಯವನ್ನು ಕಲಿಯುವುದಕ್ಕೆ ಮೀಸಲಿಡಲು ಸಿದ್ಧ. ಅದಕ್ಕಾಗಿ ಎಷ್ಟೇ ಕಷ್ಟವಾದರೂ ಚಿಂತೆ ಇಲ್ಲ. ಅದನ್ನೆಲ್ಲ ನಾನು ಸಹಿಸಬಲ್ಲೆ. ಆಗ ನನಗೆ ಎಲ್ಲವನ್ನು ಕಲಿಯಲು ಎಷ್ಟು ಕಾಲ ಬೇಕಾಗಬಹುದು ?" ಎಂದನು. ಗುರುವು ಆಗ " ಹಾಗಿದ್ದರೆ ಆಗ ನಿನಗೆ ಕಲಿಕೆ ಮುಗಿಯಲು ಎಪ್ಪತ್ತು ವರ್ಷ ಬೇಕಾಗಬಹುದು. ಆತುರದಿಂದ ಕಲಿಯುವಾತ ಏನನ್ನೂ ಕಲಿಯಲಾರ " ಎಂದನು.

ಶಿಷ್ಯನಾಗ ಬಂದವನು ಈ ಮಾತನ್ನು ಅರ್ಥಮಾಡಿಕೊಂಡ. ಗುರುವಿನ ಬಳಿ ಸೇವೆ ಮೊದಲು ಮಾಡಿದ . ದಿನವಿಡೀ ಬಗೆ ಬಗೆಯಾದ ದುಡಿತಗಳಲ್ಲಿ ತೊಡಗಿದ. ಪಾತ್ರೆತೊಳೆಯುವುದು, ಮನೆ ಸಾರಿಸುವುದು, ಕಸ ಬಾಚುವುದು, ಬಟ್ಟೆ ಶುಭ್ರಮಾಡುವುದು. ಹೀಗೆ ಹತ್ತಾರು ಕೆಲಸಗಳನ್ನು ಮಾಡುವುದು ಅವನ ದಿನಚರಿಯಾಯಿತು. ವರ್ಷಗಳು ಉರುಳಿದವು. ಗುರುವು ತಪ್ಪಿಯೂ ಅವನ ಬಳಿ ಕತ್ತಿವರಸೆ ಕಲಿಯುವ ಮಾತನ್ನು ಎತ್ತಲಿಲ್ಲ. ಇವನೂ ಕೂಡ ಗುರುವಿನ ಬಳಿ ಎಂದೂ ಆ ವಿಚಾರ ಕುರಿತು ಮಾತಾಡಲಿಲ್ಲ. ಮಾತುಕೊಟ್ಟಂತೆ ತನ್ನ ಪಾಡಿಗೆ ತಾನು ಕೆಲಸಗಳನ್ನು ಮಾಡುತ್ತಿದ್ದ. ಒಂದು ದಿನ ಶಿಷ್ಯ ತೋಟದಲ್ಲಿ ಏನೋ ಕೆಲಸದಲ್ಲಿ ತೊಡಗಿದ್ದ. ಸದ್ದಿಲ್ಲದೆ ಹಿಂದಿನಿಂದ ಬಂದ ಗುರು ಅವನಿಗೆ ತನ್ನ ಕೈಲಿದ್ದ ಉದ್ದವಾದ ಕಟ್ಟಿಗೆಯ ಕತ್ತಿಯಿಂದ ಬಲವಾಗಿ ಬಾರಿಸಿದ. ತಡೆಯಲಾಗದಂತೆ ನೋವಾಯಿತು.

ಮಾರನೆ ದಿನ ಶಿಷ್ಯ ಅಡಿಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಗುರು ಹಿಂದೆ ಮಾಡಿದಂತೆ ಇನ್ನೊಂದು ಏಟು ನೀಡಿದ. ದಿನಗಳು ಉರುಳಿದಂತೆ ಹೀಗೆ ಏಟು ಬೀಳುವುದು ಮುಂದುವರೆಯಿತು. ಎಲ್ಲೆಂದರಲ್ಲಿ ಯಾವಾಗೆಂದರೆ ಆವಾಗ ಗುರು ಕಟ್ಟಿಗೆಯ ಕತ್ತಿಯಿಂದ ಹೊಡೆಯಲು ಸಮಯ ಕಾಯುತ್ತಿದ್ದ. ಗುರು ಯಾವಾಗ ಹೊಡೆಯಬಹುದು ಎಂಬುದನ್ನು ಮುಂದಾಗಿ ತಿಳಿಯಲಾರದ ಈತ ಸದಾ ಅವನ ಕತ್ತಿಯ ಏಟಿಗೆ ಮೈಯನ್ನು ಸಿದ್ಧ ಮಾಡಿಕೊಂಡಿರುವುದನ್ನು ಕಲಿತ. ಆ ಏಟಿನಿಂದ ತಪ್ಪಿಸಿಕೊಳ್ಳಲು ಅವನ ದೇಹ



ಶಿಷ್ಯನಿಗೆ ಗುರುವಿನ ಕತ್ತಿಯ ಏಟಿನ ರುಚಿ

ಸನ್ನದ್ಧವಾಗತೊಡಗಿತು. ದೇಹವೀಗ ಯಾವುದೇ ಬಯಕೆಗಳಿಲ್ಲದ ಯಾವುದೇ ಅನ್ಯ ಚಿಂತೆಗಳಿಲ್ಲದ ಸ್ಥಿತಿಯನ್ನು ತಲುಪಿತು. ಒಂದೇ ಗುರಿ ಹೇಗಾದರೂ ಕತ್ತಿಯ ಏಟಿನಿಂದ ತಪ್ಪಿಸಿಕೊಳ್ಳಬೇಕು. ಅದಕ್ಕಾಗಿ ದೇಹದ ಎಲ್ಲ ಚಟುವಟಿಕೆಗಳು ಮೀಸಲಾದವು. ಇಂಥ ವೇಳೆ ಬಂದಾಗ ಗುರು ಮುಗುಳು ನಕ್ಕ. ಕತ್ತಿವರಸೆಯ ಪಾಠಗಳನ್ನು ಮೊದಲು ಮಾಡಿದ. ಶಿಷ್ಯ ಕೆಲವೇ ವರ್ಷಗಳಲ್ಲಿ ದೇಶದ ಅತಿ ಉತ್ತಮ ಕತ್ತಿವರಸೆಗಾರನಾದ.

ಕತೆ ೧೪

ಇದೊಂದು ವಿಚಿತ್ರ ಕತೆ. ಹಾಗೆ ನೋಡಿದರೆ ಇದರಲ್ಲಿ ಏನೂ ವಿಚಿತ್ರವಿಲ್ಲ. ಆದರೆ ಗುರುವೊಬ್ಬರು ಈ ಕತೆಯಲ್ಲಿ ತಾವು ಹೇಳಬೇಕಾದ ವಿಷಯವನ್ನು ಹೇಳಿದ ಬಗೆ ಸೊಗಸಾಗಿದೆ. ಒಂದೂರಿನಲ್ಲಿ ಒಂದು ಸಂಸಾರವಿತ್ತು. ದಿನವೂ ಗಂಡ ಕಷ್ಟಪಟ್ಟು ದುಡಿದು ತರುತ್ತಿದ್ದ. ಹೆಂಡತಿ ಹೇಗೋ ಅದರಲ್ಲಿ ಸಂಸಾರವನ್ನು ತೂಗಿಸುತ್ತಿದ್ದಳು. ವರ್ಷಗಟ್ಟಲೆ ಇದು ಅಭ್ಯಾಸವಾಯಿತು. ಇರುವುದರಲ್ಲಿ ಹೊಂದಿಕೊಳ್ಳುವುದನ್ನು ಹೆಂಡತಿ ಚೆನ್ನಾಗಿ ಕಲಿತಳು. ಆದರೆ ಕಾಲ ಹಾಗೇ ಇರಲಿಲ್ಲ. ಅವರಿಗೆ ಒಳ್ಳೆಯ ದಿನಗಳು ಬಂದವು. ಹಣ ಕೈಸೇರಿತು. ಜೀವನ ಸಾಗಿಸಲು ಅಷ್ಟು ಕಷ್ಟ ಪಡಬೇಕಾಗಿರಲಿಲ್ಲ. ಒಳ್ಳೆಯ ಹುದ್ದೆ ಗಂಡನಿಗೆ ದೊರಕಿತ್ತು. ಅದರಿಂದಾಗಿ ಅವನ ಮನೆಗೆ ದಿನವೂ ಬಗೆಬಗೆಯ ಅತಿಥಿಗಳು ಬರುತ್ತಿದ್ದರು. ಹೆಂಡತಿಗೆ ಮೈಗೂಡಿದ್ದ ಅಭ್ಯಾಸ ಸುಲಭವಾಗಿ ಹೋಗಲಿಲ್ಲ. ದುಂದುವೆಚ್ಚ ಮಾಡುವುದು ಅವಳಿಗೆ ಆಗದು. ಎಲ್ಲದಕ್ಕೂ ಕೈ ಹಿಡಿತ ಮಾಡುತ್ತಿದ್ದಳು. ನೋಡಿದವರಿಗೆ ಇವಳು ಜಿಪುಣೆ ಎಂದು ಅನ್ನಿಸುತ್ತಿತ್ತು. ಗಂಡನಿಗೂ ಹೆಂಡತಿಯ ಈ ಸ್ವಭಾವ ಅಷ್ಟು ಹಿಡಿಸುತ್ತಿರಲಿಲ್ಲ. ಇಲ್ಲದಿದ್ದಾಗ ಕೈ ಹಿಡಿತ ಮಾಡುವುದು ಸರಿ. ಇರುವಾಗಲೂ ಹಾಗೇ ಮಾಡಬೇಕೆ ? ತಿದ್ದಿಕೊಳ್ಳಬಾರದೆ ? ಈ ಮಾತಿಗೆ ಅವನಿಗೂ ಅವಳಿಗೂ ಜಗಳಗಳಾಗುತ್ತಿದ್ದವು. ಸಂಸಾರದಲ್ಲಿ ಶಾಂತಿ ಕಡಿಮೆಯಾಯಿತು. ಹೆಂಡತಿಯೂ ತನ್ನ ಗುಣವನ್ನು ತಿದ್ದಿಕೊಳ್ಳಲು ಏನೆಲ್ಲ ಮಾಡಿದಳು. ಆದರೂ ಅವಳಿಗೆ ಹೊಸ ಬಗೆಗೆ ಹೊಂದಿಕೊಳ್ಳುವುದು ಸಾಧ್ಯವಾಗಿರಲಿಲ್ಲ.

ಹೀಗಿರುವಾಗ ಒಂದು ದಿನ ಅವರ ಮನೆಗೆ ಗುರುವೊಬ್ಬರು ಬಂದರು. ಅವರ ಬಳಿ ಕುಳಿತು ಹೆಂಡತಿ ತನ್ನ ಕಷ್ಟಗಳನ್ನು ಹೇಳಿಕೊಂಡಳು. ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳಲು ಅನುಕೂಲವಾಗುವ ದಾರಿಯನ್ನು ಸೂಚಿಸಲು ಕೇಳಿದಳು.

ಗುರುಗಳು ಅವಳ ತೊಂದರೆಯನ್ನು ಕೇಳಿದರು. ಕೊಂಚ ಹೊತ್ತು ಸುಮ್ಮನಿದ್ದರು. ಮಾತು ಬೇರೆ ಮಾಡಿದರು. " ನೀನು ಕೈ ತೋರಾಟದಲ್ಲಿ ಬಲು ಜಾಣೆಯಂತೆ. ಆ ಆಟ ಆಡೋಣವೇನು ? ಕೈ ತೋರಾಟವೆಂಬುದು ಮಕ್ಕಳು ಆಡುವ ಆಟ. ಇಬ್ಬರು ಮಕ್ಕಳು ಎದುರುಬದುರಾಗಿ ಕುಳಿತುಕೊಳ್ಳುತ್ತಾರೆ. ಇಬ್ಬರೂ ಒಂದೇ ವೇಳೆಗೆ ತಮ್ಮ ಒಂದು ಕೈಯನ್ನು ಚಾಚಬೇಕು. ಹಾಗೆ ಚಾಚಿದಾಗ ಅವರ ಹಸ್ತಗಳು ತೆರೆದಿರಬಹುದು, ಮುಷ್ಠಿ ಬಿಗಿಹಿಡಿದಿರಬಹುದು. ಇಲ್ಲವೇ ಎರಡು ಬೆರಳುಗಳಿಂದ ಕತ್ತರಿಯ ಹಾಗೆ ಆಕಾರ ಮಾಡಿ ತೋರಬಹುದು. ಕೈತೆರೆದಿದ್ದರೆ ಅದು ಕಾಗದ. ಮುಷ್ಟಿಬಿಗಿಯಾಗಿದ್ದರೆ ಅದು ಕಲ್ಲು. ಎರಡುಬೆರಳು ಚಾಚಿದ್ದರೆ ಅದು ಕತ್ತರಿ. ಆಟ ಆಡುವುದು ಹೀಗೆ. ಇಬ್ಬರಲ್ಲಿ ಒಬ್ಬರು ಕಲ್ಲು ತೋರಿದಾಗ ಇನ್ನೊಬ್ಬರು ಕಾಗದ ತೋರುತ್ತಾರೆಂದುಕೊಳ್ಳಿ. ಆಗ ಗೆಲ್ಲುವುದು ಕಾಗದ. ಏಕೆಂದರೆ ಕಾಗದ ಕಲ್ಲನ್ನು ಕಟ್ಟಿಹಾಕುತ್ತದೆ. ಒಬ್ಬರದು ಕತ್ತರಿ ಇನ್ನೊಬ್ಬರದು ಕಲ್ಲಾದರೆ .ಆಗ ಸೋಲುವುದು ಕತ್ತರಿ. ಏಕೆಂದರೆ ಕಲ್ಲಿನ ಬಳಿ ಕತ್ತರಿ ಮೊಂಡಾಗುತ್ತದೆ. ಹಾಗಾದರೆ ಕಾಗದ ಸೋಲುವುದು ಯಾವಾಗ ? ಒಬ್ಬರು ಕಾಗದ ತೋರಿಸಿದರೆ ಇನ್ನೊಬ್ಬರು ಕತ್ತರಿ ತೋರಿಸುತ್ತಾರೆಂದು ಕೊಳ್ಳಿ. ಆಗ ಸೋಲುವುದು ಕಾಗದ. ಏಕೆಂದರೆ ಕತ್ತರಿ ಕಾಗದವನ್ನು ಕತ್ತರಿಸುತ್ತದೆ. ಒಂದು ವೇಳೆ ಇಬ್ಬರೂ ಒಂದೇ ವಸ್ತುವನ್ನು ತೋರಿಸಿದರೆ ಆಗ ಆಟ ಸಮಸಮ. ಹೀಗೆ ಯಾರು ಎಷ್ಟು ಬಾರಿ ಗೆಲ್ಲುತ್ತಾರೋ ಅವರು ಜಾಣರು.

ಈ ಆಟವನ್ನು ಚೆನ್ನಾಗಿ ಆಡುವವರು ಏನು ಮಾಡುತ್ತಾರೆ ? ಎದುರಾಳಿ ಯಾವುದನ್ನು ತೋರಿಸಬಹುದೆಂಬುದನ್ನು ಮೊದಲಾಗಿ ಊಹಿಸಿ ಅದಕ್ಕೆ ಅನುಗುಣವಾಗಿ ತಾವು ಗೆಲ್ಲುವ ಬಗೆಯನ್ನು ತೋರಿಸುತ್ತಾರೆ. ಇದು ಅವರಿಗೆ ಹೇಗೆ ಗೊತ್ತಾಗುತ್ತದೆ ? ಅದು ಯಾರಿಗೂ ತಿಳಿಯದು. ಇದನ್ನು ಅರಿಯದವರು ಎದುರಾಳಿ ಕಾಗದ ತೋರಿಸಬಹುದೆಂದು

ತಿಳಿದು ತಾವು ಕತ್ತರಿ ತೋರಿಸುತ್ತಾರೆ. ಆದರೆ ಎದುರಾಳಿ ಕಲ್ಲು ತೋರಿಸಿಬಿಟ್ಟಿರುತ್ತಾನೆ. ಇವರ ಊಹೆ ತಪ್ಪಾಗುತ್ತದೆ. ಸೋಲುತ್ತಾರೆ. ಗೆಲ್ಲುವವರು ಹೇಗೋ ಎದುರಾಳಿಯ ಮನಸ್ಸು ಓಡುವ ದಿಕ್ಕನ್ನು ಅರಿಯಬಲ್ಲರು. ಅದಕ್ಕೆ ತಕ್ಕ ಹಾಗೆ ತಾವು ಆಟವಾಡಿ ಗೆಲ್ಲುತ್ತಾರೆ.

ಗುರುವು ಚಾಚಿದ ಕೈಗಳನ್ನು ಅವಳು ಸುಮ್ಮನೆ ದಿಟ್ಟಿಸಿ ನೋಡ ತೊಡಗಿದಳು. ಅನಂತರ ತನ್ನ ಕೈಯನ್ನು ಕಲ್ಲಿನಂತೆ ಮುಚ್ಚಿಕೊಂಡಳು. ಏನೋ ಹೊಳೆದವಳಂತೆ ಸುಮ್ಮನಾದಳು.

ಮುಂದಿನ ದಿನಗಳಲ್ಲಿ ಅವಳ ನಡತೆ ಬದಲಾಗುತ್ತ ನಡೆಯಿತು. ಬೇಕೆಂದಾಗ ಕೈ ಬಿಗಿ ಹಿಡಿದು ಖರ್ಚು ಮಾಡುತ್ತಿದ್ದಳು. ಅವಶ್ಯಕತೆ ಬಿದ್ದಾಗ ಕೈ ಸಡಿಲುಬಿಟ್ಟು ಖರ್ಚು ಮಾಡಲು ಹಿಂಜರಿಯಲಿಲ್ಲ. ಅವಳ ಇಷ್ಟದ ಆಟ ಅವಳಿಗೆ ಒಳ್ಳೆಯ ಪಾಠ ಕಲಿಸಿತು. ಯಾವಾಗಲೂ ಕೈ ಮುಚ್ಚಿಕೊಂಡರೆ ಅಥವಾ ಯಾವಾಗಲೂ ಕೈ ತೆರೆದಿಟ್ಟುಕೊಂಡರೆ ಸಾಲದು. ಯಾವಾಗ ಕೈ ತೆರೆಯಬೇಕು ಯಾವಾಗ ಮುಚ್ಚಿಟ್ಟುಕೊಳ್ಳಬೇಕು ಎಂಬುದು ತಿಳಿದಿರಬೇಕು. ಅದು ಗೆಲುವಿನ ಗುಟ್ಟು. ಈ ಪಾಠ ಕಲಿತ ಅವಳು ಜಾಣೆಯೋ ? ಈ ಪಾಠವನ್ನು ಕಲಿಸಿದ ಗುರುಗಳು ಜಾಣರೋ ?

* * *

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ... ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ...ಗಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷ...ಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷ... ...ಲಾಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸ... ...ಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿ...ಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲ... ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ...ನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ...ಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ... ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕ...ನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವ... ...ಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮ... ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿ... ಅನೇಕ ಸಲ ಚರ್ಚಿಸಿ ಯೋಜನೆಯ... ...ಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗ... ...ನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನ...ಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾ... ...ತ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳ...ಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿ...ತ್ತಿರುವವರಿಂದ ಅದರ ಗುಣದೋಷಗಳ ...ಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ... ...ನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ... ...ಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೆ... ...ತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ. ನಂತರ ... ...ನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು